ಅರ್ಥದಲ್ಲಿ ನಾವೆಲ್ಲ ಅಪರಿಚಿತರೇ. ಇನ್ನೆರಡು ತಿಂಗಳಲ್ಲಿ ನಾವೆಲ್ಲ ನಮ್ಮ ನಮ್ಮ ಬದುಕಿನ ದಾರಿಗಳನ್ನು ಹಿಡಿದು ಹೋಗಿಬಿಡುತ್ತೇವೆ. ಇವತ್ತು ನಾವೆಲ್ಲ ನಮ್ಮ ವೈಯಕ್ತಿಕ ಬದುಕಿನ ತಲಾ ಒಂದಾದರೂ ರಹಸ್ಯಗಳನ್ನು ಹಂಚಿಕೊಂಡರೆ ಹೇಗೆ?'' ಅಂತ ಸಲಹೆ ಕೊಟ್ಟ. ಆ ಸಲಹೆ ವಿಚಿತ್ರವೆನಿಸಿದರೂ ಎಲ್ಲರೂ ಉತ್ಸಾಹದಿಂದ ಒಪ್ಪಿದರು.

ಪ್ರಪಂಚದ ಬೇರೆಬೇರೆ ಭಾಗಗಳಿಂದ ಬಂದ ಜನರಿದ್ದ ನಮ್ಮ ನಡುವೆ ಅಪರಿಚಿತತೆಯ ಬರ್ಫದ ಗಡ್ಡೆಗಳು ಹೆಪ್ಪುಗಟ್ಟಿದ್ದವು. ಚಳಿಗಾಲದ ಇಂತಹ ಒಂದು ದಿನ ಮತ್ತೊಂದು ದೇಶದಲ್ಲಿ ಕುಳಿತು, ಅವನ್ನು ಕರಗಿಸಿ ನಮ್ಮ ಬದುಕಿನ ರಹಸ್ಯಗಳನ್ನು ಹೊರಗೆಡವಲು ಸಾಧ್ಯವೇ? ಅಥವಾ ಅದೇ ಅತ್ಯಂತ ಸುಲಭದ ಕೆಲಸವೇ? ಎನ್ನುವ ಗೊಂದಲಕ್ಕೆ ಬಿದ್ದೆ.

ನನ್ನ ಸಂಶಯಗಳನ್ನು ಹೋಗಲಾಡಿಸುವಂತೆ ಗಂಭೀರವಾದ ಧ್ವನಿಯಲ್ಲಿ ಅಲೆಕ್ಸನೇ ಮೊದಲಿಗನಾಗಿ ಶುರುಮಾಡಿದ.

“ನಾನೀಗ ಬರೇ ಒಂದು ಟೇಬಲ್ ಮತ್ತು ಟೋಸ್ಟರ್'' ಎಂದ.

ಅರ್ಥವಾಗದೆ ಎಲ್ಲರೂ ಸ್ತಬ್ಧವಾಗಿ ಅವನೆಡೆ ನೋಡಿದೆವು. ಎಲ್ಲರ ಗಮನವೂ ತನ್ನ ಕಡೆಗೆ ತಿರುಗಿದ್ದು ಅವನಿಗೆ ಅರಿವಾಯಿತು. ಟೇಬಲ್ಲಿನ ಮೇಲೆ ಮುಷ್ಟಿಯನ್ನು ಮೃದುವಾಗಿ ಕುಟ್ಟುತ್ತ ಅರೆಕ್ಷಣ ಮೌನವಾಗಿ ಕುಳಿತ. ಅನಂತರ ಇದ್ದಿದ್ದನ್ನು ಇದ್ದಂತೆ ಹೇಳುವ ನಿರ್ಧಾರಕ್ಕೆ ಬಂದವನಂತೆ ಮುಂದುವರೆಸಿದ.

“ನನ್ನ ಡೈವೋರ್ಸ್ ನಡೀತಾ ಇದೆ. ನನ್ನ ಹೆಂಡತಿಯ ಲಾಯರ್ ಭಾರೀ ಐನಾತಿ. ನನ್ನ ಹೆಂಡತಿ ಕೆಲಸ ಮಾಡುತ್ತಿಲ್ಲ. ಆದರೂ ಡೈವೋರ್ಸ್ ಅನಂತರ ಅವಳಿಗೆ ಮೊದಲಿನಂತದೇ ಲೈಫ್ ಸ್ಟೈಲ್ ಬೇಕು ಅಂತ ನನ್ನ ಸರ್ವಸ್ವವನ್ನೂ ಜಪ್ತಿ ಮಾಡುತ್ತ ಬರುತ್ತಿದ್ದಾನೆ. ಮನೆ, ಮಕ್ಕಳು, ನಾನು ಅವಳಿಗೆ ಕೊಡಿಸಿದ ದುಬಾರಿ ಕಾರು, ಎಲ್ಲ ಅವಳಿಗೇ ಹೋಗಬೇಕಂತೆ. ಮಕ್ಕಳ ಪ್ರೈವೇಟ್ ಸ್ಕೂಲಿಗೆ ಮತ್ತು ಇತರೆ ಖರ್ಚಿಗೆ ಅಂತ ಪ್ರತಿ ತಿಂಗಳು ನನ್ನ ದುಡಿಮೆಯ ಎರಡನೇ ಮೂರು ಭಾಗ ಅವಳಿಗೆ ಬೇಕು ಅಂತ ದಾವಾ ಹೂಡಿದ್ದಾನೆ... ಲಾಯರಿನ ಬಿಲ್ ಕಟ್ಟಿದ ಅನಂತರ, ನನಗಾಗಿ ಉಳಿದಿರೋದು ನನ್ನ ಟೇಬಲ್ ಮತ್ತು ಟೋಸ್ಟರ್ ಮಾತ್ರ'' ಅಂತ ವಿಷಾದದಿಂದ ನಕ್ಕ.

ಆ ಹೇಳಿಕೆ ಉತ್ಪ್ರೇಕ್ಷಿತವಾದರೂ ಅವನ ಡೈವೋರ್ಸಿನ ಕಾರಣ ಇದುವರೆಗೆ ಗಳಿಸಿದ್ದನ್ನೆಲ್ಲ ಅವನು ಕಳೆದುಕೊಳ್ಳುತ್ತಿರುವುದನ್ನು ಹೇಳುತ್ತಿತ್ತು. ಅಲೆಕ್ಸ್ ನಮಗೆಲ್ಲ ದೊಡ್ಡ ಶಾಕ್ ಕೊಟ್ಟುಬಿಟ್ಟಿದ್ದ.

ಪ್ರತಿದಿನ ಶಾಂತಚಿತ್ತನಾಗಿ, ಆಕರ್ಷಕವಾಗಿ ಪಾಠ ಹೇಳುತ್ತಿದ್ದ ಈ ಬೋಧಕನ ಬದುಕಲ್ಲಿ ಬಿರುಗಾಳಿ ಎದ್ದಿತ್ತು. ಎರಡು ವರ್ಷದಲ್ಲಿ ಒಂದು ದಿನವೂ ಈ ಬಗ್ಗೆ ಸುಳಿವು ನೀಡಿರಲಿಲ್ಲ. ತೋರಿಕೆಗೆ ಅವನು ಇತರೆ ತರಬೇತುದಾರರಿಗಿಂತ ಹೆಚ್ಚು ಸಂತೋಷವಾಗಿರುವಂತೆ ಕಂಡುಬಂದಿದ್ದ.

“ಇಂಗ್ಲೆಂಡಿನ ವಿಚ್ಛೇದನ ಕಾಯ್ದೆಯ ಪ್ರಕಾರ ಹೆಂಡತಿಗೆ ಅರ್ಧಭಾಗ ಮಾತ್ರ ಅಲ್ಲವೇ?'' ಅಂತ ಕೇಳಿದೆ.

ಅಲ್ಲವೇ ಅಲ್ಲ ಎನ್ನುವಂತೆ ಅಲೆಕ್ಸ್ ತಲೆಯಾಡಿಸಿಬಿಟ್ಟ.

“ಅರ್ಧ ಅವಳೊಬ್ಬಳೇ ಆದರೆ... ಜೊತೆಗೆ ಮಕ್ಕಳನ್ನೂ ತನ್ನವರನ್ನಾಗಿ ಮಾಡಿಕೊಂಡಿದ್ದಾಳಲ್ಲ?''

“ಹಠಾತ್ತನೆ ಯಾಕೆ ವಿಚ್ಛೇದನ?'' ಕ್ಯಾಟ್ ಕ್ಯಾಶುಯಲ್ ಆಗಿ ಕೇಳಿದಳು. ಇಬ್ಬರೂ ಇಂಗ್ಲಿಷರಾದ ಕಾರಣ ಅವರ ನಡುವೆ ಸಲುಗೆ ಇತ್ತು.

“ಗೊತ್ತಲ್ಲ, ಖಾಸಗೀ ವೈದ್ಯರಾಗಿ ನಾವು ಕೆಲಸ ಮಾಡಿದರೆ ಮಾತ್ರ ದುಡಿಮೆ. ಪಿಂಚಣಿಯೂ ಇಲ್ಲ. ಎಲ್ಲ ಖರ್ಚು ಕಳೆದು, ತೆರಿಗೆ ಕಟ್ಟಿ ಉಳಿಯೋ ಹಣ ಕೈಗೆ ದೊರೆತಾಗಲಾದರೂ ಅವಳು ಲೈಫ್ ಎಂಜಾಯ್ ಮಾಡೋದು ಬೇಡವೇ? ಅದಕ್ಕೆಲ್ಲ ನನ್ನ ಹತ್ತಿರ ಸಮಯ ಎಲ್ಲಿರುತ್ತೆ?